

# ನಾಗೇಶನ ಸವಾರಿಗೆ ಸಿದ್ಧವಾದ ಗಜವಾಹನ...



ಇದು ಗಜವಾಹನ. ಸಾಗರದ ಪ್ರಖ್ಯಾತ ಶಿಲ್ಪಿಗಳಾಗಿದ್ದ ಗುಡಿಗಾರ್ ದೇವಪ್ಪ ಅವರ ಪುತ್ರ ಜಗದೀಶ್ ಗುಡಿಗಾರ್ ಕೈಯಲ್ಲಿ ಅರಳಿದ ಕಲಾಕೃತಿ ಇದು. ಗೋವಾದ ಪೊಂಡದಲ್ಲಿರುವ ನಾಗೇಶ್ ಮಹಾರುದ್ರ ದೇವರ ಉತ್ಸವಕ್ಕಾಗಿ ಸಿದ್ಧವಾದ ಈ ಕಲಾಕೃತಿಯನ್ನು ಜಗದೀಶ್ ಅವರು ತಮ್ಮ ಮಾಸ್ಟರ್ ಕ್ರಾಫ್ಟ್ ಸಂಸ್ಥೆಯಡಿ ಸಹಕಲಾವಿದರ ಸಹಾಯದೊಂದಿಗೆ ರಚಿಸಿದ್ದಾರೆ. ಹೊಯ್ಸಳ ಶೈಲಿಯಲ್ಲಿರುವ ಈ ಗಜವಾಹನವು ರಚನೆಗೊಂಡಿರುವುದು ಶಿವನಿ ಮರದಲ್ಲಿ.

10 ಅಡಿ ಎತ್ತರದ ಈ ಕಲಾಕೃತಿಯಲ್ಲಿ ಆನೆಯು 5 ಅಡಿ ಮತ್ತು ಮೇಲಿರುವ ಅಂಬಾರಿ (ಮಂಟಪ) 5 ಅಡಿ ಇದೆ. ಈ ಸುಂದರ ಕಲಾಕೃತಿ ರಚನೆಗೆ 100 ಘನ ಅಡಿ ಮರ ಬಳಕೆಯಾಗಿದ್ದು, 16 ಶಿಲ್ಪಿಗಳು ಶ್ರಮ ಪಟ್ಟಿದ್ದಾರೆ. ಸುಮಾರು ಎರಡು ವರ್ಷಗಳ ಕಾಲ ಕೆತ್ತನೆ ಕಾರ್ಯ ನಡೆದಿದೆ. ಈ ಕಲಾಕೃತಿಯು ಸಾಗರದ ಗುಡಿಗಾರರ ಸಮಾಜದ ಕುಸುರಿ ಕೆಲಸದ ನೈಪುಣ್ಯಕ್ಕೆ ಮತ್ತೊಂದು ಉದಾಹರಣೆಯಾಗಿದೆ.

—ಅಂಜನ್ ಕಾಯ್ಕಿಣಿ, ಸಾಗರ



# ನಿರಂತರ ನೀರ ಹರಿವಿನ ಕೇಶವರಾಜ

ಮಹಾರಾಷ್ಟ್ರದ ಪುಣೆಯ ಸನಿಹ ದಾಪೋಲಿಯಿಂದ 8 ಕಿ.ಮೀ. ದೂರದಲ್ಲಿ ನಿಸರ್ಗ ಸುಂದರ ಅರಣ್ಯದ ನಡುವೆ ನೆಲೆಗೊಂಡಿರುವ ಕೇಶವರಾಜ ದೇವಾಲಯವು, ಭಾರತದ ಶ್ರೀಮಂತ ಸಾಂಸ್ಕೃತಿಕ ಪರಂಪರೆಗೆ ಸಾಕ್ಷಿ. ಈ ಅತೀಂದ್ರಿಯ ದೇವಾಲಯವು ಮಹಾರಾಷ್ಟ್ರದ ಕೊಂಕಣ ಪ್ರದೇಶದ ವಿಲಕ್ಷಣ ಹಳ್ಳಿಯಾದ ಅಸುದ್‌ನಲ್ಲಿದೆ. ಇದನ್ನು ತಲುಪಲು, ಹಸಿರು ಕಾಡು, ತೊರೆಗಳ ಮೂಲಕ ತುಸು ದೂರ ಪಾದಯಾತ್ರೆ ಮಾಡಬೇಕು. ಎತ್ತರದ ತೆಂಗು, ಅಡಿಕೆ ಮರಗಳಿಂದ ಕೂಡಿದ ರಮಣೀಯ ಹಾದಿ ಇದಾಗಿದೆ.

ತನ್ನ ಕುತೂಹಲಕಾರಿ ಮೂಲದ ಕಥೆಯಿಂದ ಹಿಡಿದು ಚೇತೋಹಾರಿ ಪ್ರಾಕೃತಿಕ ಸೌಂದರ್ಯದವರೆಗೆ, ಕೇಶವರಾಜ ದೇವಾಲಯವು ವಿಭಿನ್ನ ಆಧ್ಯಾತ್ಮಿಕ ಅನುಭವವನ್ನು ನೀಡುತ್ತದೆ. ಪುರಾಣದ ಪ್ರಕಾರ ಸುಮಾರು 5 ಸಾವಿರ ವರ್ಷಗಳಷ್ಟು ಹಳೆಯದಾದ ಈ ದೇವಾಲಯವನ್ನು ಸ್ವರ್ಗೀಯ ಜೀವಿಗಳ ಸೈನ್ಯದೊಂದಿಗೆ, ರಾತ್ರೋರಾತ್ರಿ ಅಡಿಪಾಯ ಹಾಕಿ ಸಂಕೀರ್ಣ ಕೆತ್ತನೆಯೊಂದಿಗೆ ಪಾಂಡವರು ನಿರ್ಮಿಸಿರುವರೆಂಬ ದಂತಕಥೆಯಿದೆ. ಇತಿಹಾಸದ ಪ್ರಕಾರ ಇದನ್ನು ಪೇಶ್ವೆಗಳ ಆಳ್ವಿಕೆಯಲ್ಲಿ ಸ್ಥಾಪಿಸಲಾಯಿತು ಎಂದೂ ಹೇಳಲಾಗುತ್ತದೆ.



ಅದೇನಿದ್ದರೂ, ಒಳ ಕಾಲಿಡುತ್ತಿದ್ದಂತೆ ಕೊಂಕಣದ ಸಾಂಪ್ರದಾಯಿಕ ವಾಸ್ತುಶಿಲ್ಪದ ಓಜಸ್ಸು ಮತ್ತು ಸಂಕೀರ್ಣತೆ ಮೂಕವಿಸ್ಮಿತರನ್ನಾಗಿಸುತ್ತದೆ. ಸೊಗಸಾದ ಕೆತ್ತನೆಗಳು, ವಿಸ್ತಾರವಾದ ಶಿಲ್ಪಗಳು ಮತ್ತು ಪುರಾಣ ಕಥೆಗಳನ್ನು ನಿರೂಪಿಸುವ ಸುಂದರ ಕಂಬಗಳ ಮಧ್ಯಭಾಗದಲ್ಲಿ ವಿಷ್ಣುವಿನ ದೈವಿಕಾವತಾರವಾದ ಕೇಶವರಾಜ ವಿಗ್ರಹವಿದೆ. ಬಾಗಿಲುಗಳು ಮತ್ತು ಎಡ ಬಲಗಳಲ್ಲಿ ಗಣಪತಿ, ಮಾರುತಿ, ಗರುಡ ಹಾಗೂ ಶಂಖ, ಚಕ್ರ, ಕಮಲಧಾರಿ ವಿಷ್ಣುವಿನ 24 ವಿನ್ಯಾಸಗಳನ್ನು ರಚಿಸಲಾಗಿದೆ. ದೇವಾಲಯದ ಆವರಣದಲ್ಲಿ ಗೋಮುಖಾಕೃತಿಯಿಂದ ನಿರಂತರವಾಗಿ ಹರಿಯುವ ಸಿಹಿನೀರಿನ ಒರತೆಯು ಇಲ್ಲಿನ ವಿಶಿಷ್ಟತೆಯಲ್ಲೊಂದು. ಈ ನೀರನ್ನು ಪವಿತ್ರಜಲವೆಂದು ಪರಿಗಣಿಸಿ ಬಳಸಲಾಗುತ್ತದೆ. ಈ ಜಲವು ಮಂದಿರದ ಮುಂದೆ ವರ್ಷಪೂರ್ತಿ ಹರಿಯುವುದು ವಿಶೇಷ.

—ರಮಣ್ ಶೆಟ್ಟಿ ರೆಂಜಾಳ, ಮುಂಬೈ

